

# ಕಟ್ ಪೀಸ್ ಕುಮಾರ

ಇಂದು ಹರಿಕುಮಾರ್

ಕನ್ನಡಕ್ಕೆ:

ಮೆಹಬೂಬ್ ಮಠದ

Bahuroopi ಬಹುರೂಪಿ

eklavya

# ಕಟ್ ಪೀಸ್
# ಕುಮಾರ




ಕಥೆ ಮತ್ತು ಚಿತ್ರ:

**ಇಂದು ಹರಿಕುಮಾರ್**

ಕನ್ನಡಕ್ಕೆ:

**ಮೆಹಬೂಬ್ ಮಠದ**



Bahuroopi ಬಹುರೂಪಿ

eklavya



ಕುಮಾರನಿಗೆ ಏನಾದರೂ ತಯಾರಿಸುವುದು
ಅಂದರೆ ತುಂಬಾ ಇಷ್ಟ.







ಅವನು ಬೆಂಕಿಪೊಟ್ಟಣದಿಂದ ಪುಸ್ತಕ ಮತ್ತು ಆಟದ ಸಾಮಾನುಗಳನ್ನು ಮಾಡುತ್ತಿದ್ದ. ಅವನು ಬಾಟಲಿಗಳ ಮುಚ್ಚಳದಿಂದ ಚಿಟಿಕೆಗಳನ್ನು ಮಾಡುತ್ತಿದ್ದ. ಹಳೆಯ ಬಟ್ಟೆ ಚೂರುಗಳಿಂದ ಗೊಂಬೆಗಳಿಗೆ ಅಂಗಿ ಹೊಲೆಯುತ್ತಿದ್ದ. ಅವನ ಅಮ್ಮ ಬಹಳ ಪ್ರೀತಿಯಿಂದ ಅವನನ್ನು
‘ನನ್ನ ಕಟ್‌ಪೀಸ್ ಕುಮಾರ’ ಎಂದು ಕರೆಯುತ್ತಿದ್ದಳು.



ಒಂದು ದಿನ ಕುಮಾರ ಆಟವಾಡುತ್ತಿದ್ದಾಗ ಅವನ ಅಮ್ಮ ಬಂದು ಪಕ್ಕದಲ್ಲಿ ಕುಳಿತಳು. ಅವನನ್ನು ಅಪ್ಪಿಕೊಳ್ಳುತ್ತಾ, ‘ಕುಮಾರ, ನಿನಗೆ ಒಂದು ವಿಷಯ ಹೇಳಬೇಕು. ಇನ್ನು ಮೂರು ತಿಂಗಳಲ್ಲಿ ಈ ಮನೆಗೆ ಒಂದು ಮಗು ಬರುತ್ತೆ. ಅದು ತಂಗಿ ಆಗಿರಬಹುದು ಅಥವಾ ತಮ್ಮ ಆಗಿರಬಹುದು. ಏನು ಹೇಳುತ್ತೀಯಾ?’





ಕುಮಾರ ಅಮ್ಮನನ್ನು ತಬ್ಬಿಕೊಂಡು ಹೇಳಿದ “ಓಹ್...! ತಂಗಿ ಆದರೆ ಬಹಳ ಖುಷಿ. ತಮ್ಮ ಆದರೂ ಖುಷೀನೆ. ನನಗೆ ಪಾಪು ಇಷ್ಟ, ಮನೆಗೆ ಬರುವ ಪಾಪುವಿಗಾಗಿ ನಾನು ಏನಾದರೂ ಮಾಡಬೇಕು.”




‘ಆದರೆ ನಾನು ಏನನ್ನು ಮಾಡಿಕೊಡಲಿ?’
ಅಂತ ಕುಮಾರ ಮೇಲಿಂದ ಮೇಲೆ ಯೋಚಿಸಿದ.

ಮಗು ಮುಟ್ಟಬಹುದಾದ ಮತ್ತು ಹಿಡಿದುಕೊಳ್ಳುವಂತಹ ಏನಾದರೂ ಒಂದನ್ನು ಮಾಡಲು ಕುಮಾರ ಬಯಸಿದ್ದನು. ಮಗುವಿಗೆ ಪ್ರೀತಿಯ ಅನುಭವ ಆಗುವಂತಹ ಏನನ್ನಾದರೂ...



ಕುಮಾರ ಇನ್ನೂ ಹೆಚ್ಚು ಯೋಚಿಸಿದ.
ಶಾಲೆಯಲ್ಲಿದ್ದಾಗ, ಮನೆಯಲ್ಲಿದ್ದಾಗ, ಇಡೀ
ಹಗಲು ಮತ್ತು ರಾತ್ರಿ ಯೋಚಿಸುತ್ತಲೇ ಇದ್ದ.





ಒಂದು ದಿನ ಬೆಳಿಗ್ಗೆ ಅವನು ಇನ್ನೂ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಾಗ, ಥಟ್ಟನೇ ಏನೋ ಹೊಳೆದು ಎದ್ದು ಕುಳಿತು ಹೇಳಿದನು “ಕೌದಿ! ನಾನು ಕೌದಿಯನ್ನು ಮಾಡುತ್ತೇನೆ. ಅದು ಮಗುವನ್ನು ಬೆಚ್ಚಗೆ ಇಡುತ್ತದೆ.”

ಆದರೆ ಕೌದಿ ಮಾಡಲಿಕ್ಕೆ ಬಟ್ಟೆ ಎಲ್ಲಿಂದ ಬರುತ್ತದೆ?


RATHI SUR
RATHI SUR
RATHI SUR
RATHI SUR



“ನನ್ನ ಹರಿದ ರವಿಕೆಯಿಂದ
ಸೂರ್ಯರನ್ನು ತೆಗೆದುಕೋ”
ಅಂದಳು ಅಮ್ಮ.

“ನನ್ನ ಹಳೆಯ ಸೀರೆಯಿಂದ
ಅಲೆಗಳನ್ನು ಕೊಡುತ್ತೇನೆ”
ಅಂದಳು ಅಮ್ಮಮ್ಮ.



ಅಪ್ಪ ತಮ್ಮ ಹಳೆಯ ಅಂಗಿಯಿಂದ ಕುಮಾರನಿಗೆ ಜೋಬನ್ನು ಕೊಟ್ಟರು.

ಅಜ್ಜಿ ಅವನಿಗೆ ಹಳದಿ ಬಟ್ಟೆ ಚೂರುಗಳನ್ನು ಕೊಟ್ಟರು.




ಆದರೆ ಇನ್ನೂ ಒಳ್ಳೆಯ
ಬಟ್ಟೆ ತುಂಡುಗಳು ಸಿಕ್ಕಿದ್ದು
ಮಾತ್ರ ಚಾಂದ್ ಮಾಸ್ಟರ್
ಅವರ ಟೇಲರಿಂಗ್
ಅಂಗಡಿಯಿಂದ.

ಆಹಾ! ಅವುಗಳ
ವಿನ್ಯಾಸಗಳನ್ನು ನೋಡಿ!



ಕುಮಾರನು ಅವುಗಳನ್ನು ವಿಂಗಡಿಸಿ, ತನಗೆ ಇಷ್ಟವಾದವುಗಳನ್ನು ಆಯ್ಕೆ ಮಾಡಿಕೊಂಡ.


ಅವನು ನಕ್ಷತ್ರಗಳು, ಸೂರ್ಯರು ಮತ್ತು ಹಡಗುಗಳನ್ನು ಕತ್ತರಿಸಿಕೊಂಡ. ಅದರಲ್ಲಿ ಹಳದಿ, ಕೆಂಪು ಮತ್ತು ಹಸಿರು ಬಣ್ಣದ ತುಂಡುಗಳಿದ್ದವು. ಅವನು ಅವುಗಳನ್ನೆಲ್ಲ ಒಂದು ವಿನ್ಯಾಸದಲ್ಲಿ ಜೋಡಿಸಿಕೊಂಡ, ತನ್ನ ಸೂಜಿಗೆ ದಾರವನ್ನು ಪೋಣಿಸಿಕೊಂಡು ಕೌದಿ ಹೊಲಿಯಲು ಆರಂಭಿಸಿದ.






ಅವನ ಗೆರೆಗಳು ನೇರವಾಗಿದ್ದವು, ಕೆಲವು ಸೊಟ್ಟ–ಪಟ್ಟವಾಗಿ, ಇನ್ನೂ ಕೆಲವು ಅಂಕು–ಡೊಂಕಾಗಿ ಇದ್ದವು. ಅಲ್ಲಿ ಅಲೆ–ಅಲೆಯಾದ ಗೆರೆಗಳು ಮತ್ತು ವೃತ್ತಗಳೂ ಇದ್ದವು.








ಅವು ಎಡದಿಂದ ಬಲಕ್ಕೂ
ಮತ್ತು ಮೇಲಿಂದ ಕೆಳಕ್ಕೂ
ಹೋಗುತ್ತಿದವು.





ಅವನು ಪ್ರತಿ ದಿನವೂ ಶಾಲೆಗೆ ಹೋಗುವ ಮೊದಲು ಮತ್ತು ಶಾಲೆಯ ನಂತರವೂ ಕೆಲಸ ಮಾಡುತ್ತಿದ್ದ. ಅಮ್ಮಮ್ಮ ಹೇಳಿದರು, “ಅದಕ್ಕೆ ಸೀರೆಯಿಂದ ಪದರನ್ನು ಹೊಲಿಯಬೇಕು.” ಆ ಕೌದಿಗೆ ಪದರನ್ನು ಹೊಲೆಯುವಲ್ಲಿ ಅಮ್ಮಮ್ಮ ಅವನಿಗೆ ಸಹಾಯ ಮಾಡಿದರು. ಮೂರು ತಿಂಗಳುಗಳ ನಂತರ ಕೊನೆಗೂ ಕೌದಿಯ ಕೆಲಸ ಪೂರ್ಣಗೊಂಡಿತು.

ಮಗುವಿಗಾಗಿ ಮನೆಯಲ್ಲಿ ಏನು ಕಾಯುತ್ತಿದೆ ನೋಡಿ!









121

# CUT PIECE KUMARA


Story and Illustrations: **Indu Harikumar**

Kannada Translation: **Mehaboob Mathad**



Kannada Publishing © Bahuroopi and Eklavya


Cutpiece Kumar (English) was selected for the BRAW Amazing Bookshelf, Bolona Ragazzi Award 2025 at the Bologna Children's Book Fair


CC BY NC ND

Original Story and Illustrations: Indu Harikumar, Sept 2020

You are free to copy and distribute the text with no change for non-commercial purposes with attribution to the original author-illustrator and the publisher. For any other permissions, the author-illustrator must be contacted through Eklavya.



This translation emerged through the Bimba Pratibimba Translation Workshop 2024 anchored by the Parag Initiative of Tata Trusts conducted in collaboration with Bahuroopi.

parag
AN INITIATIVE OF TATA TRUSTS

The development of the original is supported by the Parag Initiative of Tata Trusts.

Co-published By


**BAHUROOPI Fire Flies**
R P Regency, F-1, 2nd Floor,
2nd Cross, P&T Colony, R T Nagar,
Bangalore - 560 032
editor@bahuroopi.in
Mobile | WhatsApp Bookstore: **70191 82729**
online book store: **bahuroopi.in**

**EKLAVYA FOUNDATION**
Jamnalal Bajaj Parisar
Jatkhedi, Bhopal - 462 026 (MP)
Phone: **+91 755 297 7770-71-72**
www.eklavya.in / books@eklavya.in

ISBN: 978-81-984197-8-1
First Edition: May 2025
Pages: 28 | Price: ₹130.00
**Printed In India**

Paper: 100 gsm Maplitho (Inside) and 300 gsm FB Board (Cover)





**ಇಂದು ಹರಿಕುಮಾರ್**

ಇಂದು ಹರಿಕುಮಾರ್ ಅವರು ಕಲಾವಿದೆ ಮತ್ತು ಲೇಖಕಿ. 'ಲಭ್ಯವಿರುವ ವಸ್ತುಗಳಿಂದ' ಕಲಾಕೃತಿ ಮಾಡುವುದೆಂದರೆ ಅವರಿಗೆ ಇಷ್ಟ. ಇವರು ಹಲವಾರು ಮಕ್ಕಳ ಪುಸ್ತಕಗಳನ್ನು ಬರೆದಿದ್ದಾರೆ ಹಾಗೂ ಹಲವು ಪುಸ್ತಕಗಳಿಗೆ ಚಿತ್ರಗಳನ್ನು ರಚಿಸಿದ್ದಾರೆ. ಇವರ ಕೃತಿಗಳು ದೇಶ, ವಿದೇಶಗಳಲ್ಲಿ ಪ್ರದರ್ಶನ ಕಂಡಿವೆ. ಕೆಲಸ ಮಾಡುವಾಗ ಬಾಲಿವುಡ್ ಹಾಡುಗಳನ್ನು ಗುನುಗುವುದೆಂದರೆ ಇವರಿಗೆ ತುಂಬಾ ಇಷ್ಟ.



**ಮೆಹಬೂಬ್ ಮಠದ**

ಸದಾ ಯಾವುದೋ ಗುಂಗಿನಲ್ಲಿ ಇರುವಂತೆ ಕಾಣುವ ಇವರು ಭರವಸೆಯ ಕವಿ. ಶಾಲಾ ಪ್ರಾಧ್ಯಾಪಕ. ಮಕ್ಕಳಿಗೆ ಸಾಹಿತ್ಯದ ರುಚಿ ಉಣಬಡಿಸುವುದು ಇವರಿಗೆ ತುಂಬಾ ಇಷ್ಟ. ಪುಸ್ತಕಗಳು ಇವರ ನಿತ್ಯ ಸಂಗಾತಿ.

ತನ್ನ ಕುಟುಂಬಕ್ಕೆ ಮತ್ತೊಬ್ಬರು
ಸೇರುತ್ತಿದ್ದಾರೆ ಅಂತ ಕೇಳಿದ ಕೂಡಲೇ ಕುಮಾರ
ಸಂಭ್ರಮಿಸಿದ. ಆ ಹೊಸಬರಿಗೆ
ಏನಾದರೂ ಮಾಡಿಕೊಡಬೇಕೆಂದು ಅವನು ನಿರ್ಧರಿಸಿದ.
ಅವನು ಮತ್ತೆ ಮತ್ತೆ ಯೋಚಿಸಿ, ಅಂತಿಮವಾಗಿ
ಮಾಡಲು ನಿರ್ಧರಿಸಿದ್ದು...

Bahuroopi
ಬಹುರೂಪಿ
eklavya
parag
AN INITIATIVE OF TATA TRUSTS
Price: ₹ 130
9 788198 419781